**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ನ್ಯಾಯಾಲಯ, ಮುಳಬಾಗಿಲು</u>**

**ಸಿಸಿ ನಂ. 32/2020**

ಡಿಡಬ್ಲ್ಯೂಃ 1

**ದಿನಾಂಕಃ17.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಫಿರ್ಯಾದುದಾರರ ಪರ ಶ್ರೀ ಆರ್ ಎಲ್ ರವರಿಂದಃ</u>**

ನನ್ನ ಹೆಸರು ಆಂಜಿನಪ್ಪ.ಹೆಚ್.ಹನಮಂತಪುರ ಗ್ರಾಮದಲ್ಲಿ ಆಂಜಿನಪ್ಪ. ಹೆಚ್ ಬಿನ್ ಹನುಮಪ್ಪ ಎಂಬುವವರು ಸುಮಾರು 5 ಜನರು ಇದ್ದಾರೆ. ಪಿರ್ಯಾದುದಾರರು ಸುಮಾರು 15 ವರ್ಷಗಳಿಂದ ಗೊತ್ತಿರುತ್ತಾರೆ. ಫಿರ್ಯಾದುದಾರರ ಮನೆಗೆ ಒಂದು ಬಾರಿ ಹೋಗಿರುತ್ತೇನೆ. ಫಿರ್ಯಾದುದಾರರು ತೋಟದಲ್ಲಿ ಮನೆ ಕಟ್ಟಿಕೊಂಡು ಇದ್ದಾರೆ ಎಂದರೆ ಗೊತ್ತಿಲ್ಲ, ಸಾಕ್ಷಿ ಮುಂದುವರೆದು ನಂಗಲಿಯ ಹತ್ತಿರ ಹೋಗಿರುತ್ತೇನೆ, ಅವರ ಮನೆಗೆ ಹೋಗಿಲ್ಲ ಎಂದು ನುಡಿದಿರುತ್ತಾರೆ. ನಾನು ಮಾಡಿರುವ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ನಿಪಿ 1 ರ ಚೆಕ್ ಅನ್ನು ತೋರಿಸಲಾಗಿ ಅದರಲ್ಲಿರುವ ನಿಪಿ1(ಎ) ಸಹಿ ನನ್ನದೇ ಎಂದು ಒಪ್ಪಿಕೊಂಡಿರುತ್ತಾರೆ, ಅದರಲ್ಲಿರುವ ಬರವಣಿಗೆ ನನ್ನದಲ್ಲ ಎಂದು ನುಡಿದಿರುತ್ತಾರೆ. ನಿಪಿ

6ರ ಅಂಚೆ ಸ್ವೀಕೃತಿಯನ್ನು ತೋರಿಸಲಾಗಿ ಅದರಲ್ಲಿರವ ಸಹಿ ನನ್ನದಲ್ಲ ಎಂದು ನುಡಿದಿರುತ್ತಾರೆ.ನೋಟೀಸ್ ಅನ್ನು ಕಳುಹಿಸಿದಾಗ ನಾನೇ ಅಂಚೆ ಸ್ವೀಕೃತಿಗೆ ಸಹಿ ಮಾಡಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ನಾನು ಫಿರ್ಯಾದುದಾರರ ಬಳಿ ಹಣ ತೆಗೆದುಕೊಂಡಿಲ್ಲ. ಮುಳಬಾಗಿಲಿನ ತಾಲ್ಲೂಕು ಕಛೇರಿಯಲ್ಲಿ ಜೆರಾಕ್ಸ್ ಅಂಗಡಿಯನ್ನು ಇಟ್ಟಿದ್ದರು. ಆ ಜೆರಾಕ್ಸ್ ಅಂಗಡಿ ಯಾರಿಗೆ ಸೇರಿದ್ದು ಎಂದು ಗೊತ್ತಿಲ್ಲ. ಫಿರ್ಯಾದುದಾರರು ಗಂಗಾದರಪ್ಪ ಎಂಬುವವರ ಮೂಲಕ 50,000/- ರೂ ಹಣ ಕೊಡಿಸಿರುತ್ತಾರೆ. ಸದರಿ ಗಂಗಾದರಪ್ಪ ರವರು ನನಗೆ ಗೊತ್ತು. ಗಂಗಾದರಪ್ಪ ರವರನ್ನು ಕರೆಸಿ ಸಾಕ್ಷಿ ಮಾಡಿಸಲು ತೊಂದರೆ ಇಲ್ಲ. ಗಂಗಾದರ ರವರು ನನಗೆ ಕರೆ ಮಾಡಿ ಬಡ್ಡಿ ಹಣ ಕೇಳಿದ್ದರು. ಗಂಗಾದರಪ್ಪ ಏನು ಕೆಲಸ ಮಾಡುತ್ತಾರೆ, ಯಾವ ಊರಿನವರು ಎಂದರೆ ಗೊತ್ತಿಲ್ಲ. ಫಿರ್ಯಾದುದಾರರು ದಿಃ 25.09.2019 ರಂದು ಎಷ್ಟು ಗಂಟೆಗೆ ಕರೆ ಮಾಡಿದ್ದರು ಎಂದರೆ ನೆನಪಿಲ್ಲ. ಫಿರ್ಯಾದುದಾರರು ಕರೆ ಮಾಡಿ ಗಂಗಾದರಪ್ಪರವರ ಹಣವನ್ನು ವಾಪಸ್ಸು ಕೊಡಿ ಎಂದು ಕೇಳಿದರು, ಸಾಕ್ಷಿ ಮುಂದುವರೆದು 2019 ರ ಏಪ್ರಿಲ್ ನಲ್ಲಿ ನನಗೆ ಫಿರ್ಯಾದುದಾರರು ಕರೆ ಮಾಡಿದ್ದರು ಎಂದು ನುಡಿದಿರುತ್ತಾರೆ. ದಿಃ 25.09.2019 ರಂದು ಫಿರ್ಯಾದುದಾರರು ನನಗೆ ಕರೆ ಮಾಡಿರುವುದಿಲ್ಲ. ಸೆಪ್ಟೆಂಬರ್ ತಿಂಗಳಿನಲ್ಲಿ ಚೆಕ್ ಮೂಲಕ ಹಣ ನೀಡಿರುತ್ತೇನೆ, ದಿನಾಂಕ ನೆನಪಿಲ್ಲ.

ಫಿರ್ಯಾದುದಾರರಿಗೆ ನಗದಾಗಿ ಹಣವನ್ನು ಕೊಡಲು ತೆಗೆದುಕೊಂಡು ಹೋಗಿಲ್ಲ. ನನ್ನ ಬಳಿ ಹಣ ಇಲ್ಲದಿದ್ದ ಕಾರಣ ಚೆಕ್ ಅನ್ನು ಕೊಟ್ಟಿರುತ್ತೇನೆ. ಗಂಗಾದರಪ್ಪ ರವರಿಗೆ ಕೊಟ್ಟಿದ್ದ ಎನ್ನಲಾದ ಚೆಕ್ ಮತ್ತು ಫಿರ್ಯಾದುದಾರಿಗೆ ನೀಡಿರುವ  ಎರಡೂ ಚೆಕ್ ಒಂದೇ ಬ್ಯಾಂಕಿನದ್ದು ಎಂದರೆ ಸರಿ. ಈಗಾಗಲೇ ಫಿರ್ಯಾದುದಾರರ ಬಳಿ ಒಂದು ಚೆಕ್ ಕೊಟ್ಟಿರುವುದಾಗಿ ಹೇಳಿದ್ದು, ಮತ್ತೊಂದು ಚೆಕ್ ಅನ್ನು ಕೊಡುವ ಪ್ರಮೇಯ ಏನಿತ್ತು  ಎಂದರೆ ಸಾಕ್ಷಿಯು ಆ ಚೆಕ್ ಕಳೆದು ಹೋಗಿದೆ ಎಂದು ಹೇಳಿದ್ದರಿಂದ ಮತ್ತೊಂದು ಚೆಕ್ ಅನ್ನು ಕೊಟ್ಟಿರುವುದಾಗಿ ನುಡಿದಿರುತ್ತಾರೆ. ನಾನು ವ್ಯವಹಾರ ಮಾಡುವ ಕಾರಣ ಪ್ರತಿನಿತ್ಯ ಹೊರಗೆ ಹೋಗುವಾಗ ಚೆಕ್ ಪುಸ್ತಕವನ್ನು ತೆಗೆದುಕೊಂಡು ಹೋಗುತ್ತೇನೆ. ದಿಃ 26.09.2019 ರಂದು ನಾನು

ಹಣ ತೆಗೆದುಕೊಂಡು ಫಿರ್ಯಾದುದಾರರ ಬಳಿ ಹೋಗಿದ್ದೆ ಎಂದು  ಹೇಳಿರುವುದು ಸರಿ. ಆ ದಿನ ನಾನು ಕೋಲಾರದಿಂದ 12.00 ಗಂಟೆಗೆ ಬಿಟ್ಟಿರುತ್ತೇನೆ. ಕೋಲಾರದಿಂದ ಬರುವಾಗ ನನ್ನ ಬ್ಯಾಗ್ ನಲ್ಲಿ ಚೆಕ್ ಪುಸ್ತಕ ಮತ್ತು ಜೆರಾಕ್ಸ್ ದಾಖಗಳನ್ನು ತಂದಿದ್ದೆ. ಈ ದಾಖಲೆಗಳನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಗಳನ್ನು ತಂದಿರುವುದಿಲ್ಲ.

ಫಿರ್ಯಾದುದಾರರಿಗೆ ಹಣ ಕೊಡಲು ಹೋದಾಗ ಬದ್ರತೆಗಾಗಿ ನೀಡಿದ್ದ ಚೆಕ್ ಅನ್ನು ವಾಪಸ್ಸು ಕೊಡದೇ ಇರುವುದರಿಂದ ಮತ್ತೊಂದು ಚೆಕ್ ಅನ್ನು ಬರೆದುಕೊಟ್ಟಿರುವುದಾಗಿ ಹೇಳಿರುವುದು ನಿಜ. ದಿಃ 26.09.2019 ರಂದು ಯಾವುದೇ ಸ್ಟಾಂಪ್ ಪೇಪರ್ ಬರವಣಿಗೆ ಮಾಡಿಲ್ಲ. ಫಿರ್ಯಾದುದಾರರೇ ಸ್ಟಾಂಪ್ ಪೇಪರ್ ಅನ್ನು ತಂದಿರುತ್ತಾರೆ,  ಯಾವಾಗ ತಂದಿರುತ್ತಾರೆ ಎಂದು ಗೊತ್ತಿಲ್ಲ. ನಾನು 10 ನೇ ತರಗತಿಯವರೆಗೆ ಓದಿದ್ದು ಓದಲು, ಬರೆಯಲು ಬರುತ್ತದೆ. ನಿಡಿ 2ರ ದಾಖಲೆಯ ದಿನಾಂಕಃ 26.09.2019. ನಿಡಿ 2 ರ ಸ್ಟಾಂಪ್ ಪೇಪರ್ ಅನ್ನು ಯಾರು ಎಲ್ಲಿ ಖರೀದಿ ಮಾಡಿದ್ದಾರೆ ಎಂದು ಗೊತ್ತಿಲ್ಲ. ನಿಡಿ 2 ರ ಸ್ಟಾಂಪ್ ಪೇಪರ್ ಅನ್ನು ಕೋಲಾರದ ದೊಡ್ಡ ಪೇಟೆಯಲ್ಲಿ ಖರೀದಿಸಲಾಗಿದೆ ಎಂದರೆ ಗೊತ್ತಿಲ್ಲ. ನಿಡಿ 2 ರ ದಾಖಲೆಯಲ್ಲಿ ಎರಡನೇ ಪಾರ್ಟಿಯ ಹೆಸರು ಆಂಜನಪ್ಪ ಎಂದು ಇದೆ ಎಂದರೆ ಸರಿ, ಸಾಕ್ಷಿ ಮುಂದುವರೆದು  ನನ್ನ ಹೆಸರು ಆಂಜನಪ್ಪ ಎಂದು ಹೇಳಿರುತ್ತಾರೆ. ನಿಡಿ 2 ರ ದಾಖಲೆಯನ್ನು ಯಾವಾ ದಿನಾಂಕದಂದು ಬರೆದಿರುತ್ತಾರೆ ಎಂದರೆ ಗೊತ್ತಿಲ್ಲ. ನಿಡಿ 2 ರ ದಾಖಲೆಯಲ್ಲಿ ಏನು ಬರೆದಿದ್ದಾರೆ ಎಂದು ಗೊತ್ತಿಲ್ಲ.

ನಿಡಿ 2 ರ ದಾಖಲೆಯಲ್ಲಿ ನಾನು ಕೊಟ್ಟಿರುವ ಚೆಕ್ ನ ಮೊತ್ತವನ್ನು ದಿಃ 18.10.2019 ರಂದು ಫಿರ್ಯಾದುದಾರರು ಪಡೆದುಕೊಂಡಿರುವುದಾಗಿ ನಮೂದಾಗಿರುತ್ತದೆ. ನಿಡಿ 2 ಸ್ಟಾಂಪ್ ಪೇಪರ್ ಅನ್ನು ದಿಃ 26.09.2019 ರಂದು ಪಡೆದಿದ್ದು ಅದರಲ್ಲಿ ದಿಃ18.10.2019 ರಂದು ಹಣ ಪಡೆದಿರುವುದಾಗಿ ನಮೂದಾಗಿದೆ ಎಂದರೆ ಅ ದಿನಾಂಕದಂದು ಹಣ ಪಡೆದಿರುವುದು ನಿಜ ಎಂದು ನುಡಿದಿರುತ್ತಾರೆ. ಈ ಕೇಸು ದಾಖಲಾದ ನಂತರ ನಿಡಿ 2 ರ ದಾಖಲೆಯನ್ನು ನಾನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ 2ರ

ದಾಖಲೆಯಲ್ಲಿರುವ ಸಹಿ ಪಿರ್ಯಾದುದಾರರ ಸಹಿ ಅಲ್ಲ, ಈ ಕೇಸಿನಿಂದ ತಪ್ಪಿಸಿಕೊಳ್ಳುವ ಸಲುವಾಗಿ ನಿಡಿ 2 ರ ದಾಖಲೆಯನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಫಿರ್ಯಾದುದಾರಗೆ ದಾಖಲೆ ಬರೆದುಕೊಡುವ ಅವಶ್ಯಕತೆ ಇದ್ದಿದ್ದರೆ ಮುಳಬಾಗಿಲುನಲ್ಲಿ ಸ್ಟಾಂಪ್ ಪೇಪರ್ ಖರೀದಿಸುತ್ತಿದ್ದರು, ಕೋಲಾರಕ್ಕೆ ಹೋಗಿ ಸ್ಟಾಂಪ್ ಪೇಪರ್ ಖರೀದಿಸುವ ಅವಶ್ಯಕತೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಡಿ 2 ರ ದಾಖಲೆಯಲ್ಲಿ ಯಾವ ದಿನಾಂಕದಂದು ಬರವಣಿಗೆ ಮಾಡಲಾಗಿದೆ ಎಂದು ನಮೂದು ಆಗಿಲ್ಲ ಎಂದರೆ ಗೊತ್ತಿಲ್ಲ. ನಿಡಿ 2 ರ ದಾಖಲೆಯನ್ನು ಸಾಕ್ಷಿದಾರರು ಮತ್ತು ಬಿಕ್ಲಂದಾರರು ನಮೂದು ಮಾಡಿಲ್ಲ ಎಂದರೆ ಸಾಕ್ಷಿಯು ಗೊತ್ತಿಲ್ಲ, ಅವರು ಕೊಟ್ಟಿರುವುದನ್ನು ತೆಗೆದುಕೊಂಡಿರುವುದಾಗಿ ನುಡಿದಿರುತ್ತಾರೆ. ಪಿರಾದುದಾರರು ನನಗೆ ಬರೆದುಕೊಟ್ಟಿದ್ದರೆ ನಿಡಿ 2 ರಲ್ಲಿ ನನ್ನ ಸಹಿ ಇರಬೇಕಿತ್ತು ಎಂದರೆ ನಾನು ಸಹಿ ಮಾಡಿಲ್ಲ ಎಂದು ನುಡಿದಿರುತ್ತಾರೆ.

ನಿಪಿ 1 ರ ಚೆಕ್ ನಲ್ಲಿ ನಮೂದಿಸಿರುವ ಹಣವನ್ನು ಕೊಡುವ ಬ್ಯಾದತೆಯಿಂದ ತಪ್ಪಿಸಿಕೊಳ್ಳಲು ನಿಡಿ 2 ರ ದಾಖಲೆಯನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಗಂಗಾದರಪ್ಪ ರವರ ಕಡೆಯಿಂದ ಫಿರ್ಯಾದುದಾರರು ಹಣ ಕೊಡಿಸಿದ್ದರು, ಅದಕ್ಕೆ ಭದ್ರತೆಗಾಗಿ ಚೆಕ್ ಕೊಟ್ಟಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಬಾಮ್ಮೈದುನನ ಮೂಲಕ 7,500/- ರೂ ಹಣ ಕಳಿಸಿರುವ ಬಗ್ಗೆ ಹೇಳಿದ್ದು, ಆ ವ್ಯವಹಾರಕ್ಕೂ  ಫಿರ್ಯಾದುದಾರರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 2019 ರ ಮೇ ತಿಂಗಳಿನಲ್ಲಿ ಫಿರ್ಯಾದುದಾರರ ಮನೆಯ ಹತ್ತಿರ ಬಂದು 10 ಲಕ್ಷ ಹಣ ಕೇಳಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಕೌಟುಂಬಿಕ ಸಮಸ್ಯೆಗಾಗಿ ಮತ್ತು ನನ್ನ ವ್ಯವಹಾರವನ್ನು ಅಭಿವೃದ್ದಿಪಡಿಸಲು ಫಿರ್ಯಾದುದಾರರ ಬಳಿ ಹಣ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನನನ ಸಮಸ್ಯೆಯ ಬಗ್ಗೆ ಫಿರಾದುದಾರರಿಗೆ ಗೊತ್ತಿದ್ದರಿಂದ ಅವರ ಬಳಿ ಇಟ್ಟುಕೊಂಡಿದ್ದ 10 ಲಕ್ಷ ಹಣವನ್ನು ನನಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 10 ಲಕ್ಷ ಹಣದ ಮರುಪಾವತಿಗಾಗಿ ನಿಪಿ 1 ರ ಚೆಕ್ ಅನ್ನು ಫಿರ್ಯಾದುದಾರರಿಗೆ ನೀಡಿರುತ್ತೇನೆ  ಎಂದರೆ ಸರಿಯಲ್ಲ.

ನಾನು ಕೇಳಿದ ಮೇರೆಗೆ ಫಿರ್ಯಾದುದಾರರು ನಿಪಿ 1 ರ ಚೆಕ್ ಅನ್ನು ತಮ್ಮ ಬ್ಯಾಂಕಿಗೆ ನಗದೀಕರಿಸಲು ಹಾಜರುಪಡಿಸಿರುತ್ತಾರೆ ಎಂದರೆ ಸರಿಯಲ್ಲ. ದಿಃ25.07.2019 ರಂದು ನನ್ನ ಖಾತೆಯಿಂದ ಸಾಕಷ್ಟು ಹಣ ಇಲ್ಲ ಎಂದು ಬ್ಯಾಂಕಿನಿಂದ ಫಿರ್ಯಾದುದಾರರಿಗೆ ಹಿಂಬರಹ ನೀಡಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ಹಿಂಬರಹ ಬಂದ ನಂತರ ಫಿರ್ದಾದುದಾರರು ಖುದ್ದಾಗಿ ನನ್ನನ್ನು ಬೇಟಿ ಮಾಡಿ ಚೆಕ್ ಬೌನ್ಸ್ ಆಗಿರುವ ಬಗ್ಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆಗ ನಾನು 9 ನೇ ತಿಂಗಳಿನಲ್ಲಿ ಚೆಕ್ ಅನ್ನು ಬ್ಯಾಂಕಿಗೆ ಹಾಕುವಂತೆ ಆಶ್ವಾಸನೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಹೇಳಿಕೆಯ ಮೇರೆಗೆ 2 ನೇ ಯ ಬಾರಿಗೆ ದಿಃ 04.09.2019 ರಂದು ಬ್ಯಾಂಕಿಗೆ ಚೆಕ್ ಅನ್ನು ಹಾಕಿರುತ್ತಾರೆ ಎಂರೆ ಸರಿಯಲ್ಲ. 2 ನೆಯ ಬಾರಿ ಕೂಡಾ ನನ್ನ ಖಾತೆಯಲ್ಲಿ ಸಾಕಷ್ ಟುಹಣ ಇಲ್ಲ ಎಂದು ಬ್ಯಾಂಕಿನಿಂದ ಹಿಂಬರಹ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 2 ನೇಯ ಬಾರಿ ಚೆಕ್ ಅಮಾನ್ಯಗೊಂಡಾಗಲೂ ಫಿರ್ಯಾದುದಾರರು ಖುದ್ದಾಗಿ ನನ್ನನ್ನು ಬೇಟಿ ಮಾಡಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

ನಂತರ ನಾನು ಯಾವುದೇ ಉತ್ತರ ನೀಡದಿದ್ದರಿಂದ ತಮ್ಮ ವಕೀಲರ ಮೂಲಕ ನೋಟೀಸ್ ಅನ್ನು ನೀಡಿರುತ್ತಾರೆ ಎಂದರೆ ನನಗೆ ನೋಟೀಸ್ ಬಂದಿಲ್ಲ. ನಾನು ಸಹಿ ಮಾಡಿ ನೋಟೀಸ್ ಅನ್ನು ಪಡೆದಿದ್ದರೂ ಈ ದಿನ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2020 ರಲ್ಲಿ ನ್ಯಾಯಾಲಯದಿಂದ ಸಮನ್ಸ್ ಬಂದಾಗ ಫಿರ್ಯಾದುದಾರರು ಈ ಪ್ರಕರಣ ದಾಖಲಿಸಿರುವ ಬಗ್ಗೆ ಗೊತ್ತಾಗಿರುತ್ತದೆ. ಈ ನ್ಯಾಯಾಲಯಕ್ಕೆ ಬಂದ ನಂತರ ಪ್ರಕರಣದ ಬಗ್ಗೆ ಗೊತ್ತಾದ ಮೇಲೆ ಫಿರ್ಯದುದಾರರ ನೋಟೀಸ್ ಗೆ ಉತ್ತರ ನೀಡಿರುವುದಿಲ್ಲ, ಫಿರ್ಯಾದುದಾರರು ನನ್ನ ಚೆಕ್ ಅನ್ನು ದುರುಪಯೋಗ ಮಾಡಿಕೊಂಡಿದ್ದಾರೆ ಎಂದು ಅವರ ಮೇಲೆ ಪೊಲೀಸರಿಗೆ ದೂರು ಕೊಡಲು ಪ್ರಯತ್ನಿಸಿಲ್ಲ. ನಿಪಿ 1 ರ ಚೆಕ್ ಅನ್ನು ಫಿರ್ಯಾದುದಾರರಿಗೆ ನೀಡಿರುವುದರಿಂದ ಅವರ ಮೇಲೆ ಪೊಲೀಸರಿಗೆ ದೂರು ನೀಡಿಲ್ಲ ಎಂದರೆ ಸರಿಯಲ್ಲ.ಫಿರ್ಯಾದುದಾರರಿಗೆ ಹಣ ಕೊಡುವ ಬಾಧ್ಯತೆಯಿಂದ ತಪ್ಪಿಸಿಕೊಳ್ಳಲು ನಾನು ಹಾಜರುಪಡಿಸಿರುವ ದಾಖಲೆಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೆ. ಸ. ಇದೆ.

ಸಹಿ/-

(ಶ್ರೀಮತಿ ರೋಹಿಣಿ. ಡಿ)

ಅಪರ ಸಿ.ಜೆ ಮತ್ತು ಜೆಎಂಎಫ್ ಸಿ

ಮುಳಬಾಗಿಲು